**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 2275/2024**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಫಕೀರಪ್ಪ ಕಳನಕೊಪ್ಪ |
| ತಂದೆಃ ಗಂಡನ ಹೆಸರು | ಶಿವಪ್ಪ |
| ಉದ್ಯೋಗ | ಶೇತ್ಕಿ |
| ವಯಸ್ಸು | 56 ವರ್ಷ |
| ವಾಸಸ್ಥಳ | ನೀರಸಾಗರ |

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

1 ರಿಂದ 6 ಆರೋಪಿತರು ನನಗೆ ಪರಿಚಯವಿಲ್ಲ.

ದಿಃ 02.09.2024 ರಂದು ರಾತ್ರಿ ಸುಮಾರು 10.00 ಗಂಟೆಗೆ ಕಾಸಿನಕೊಪ್ಪ ಬಸ್ ನಿಂದ ಇಳಿದು ನಾನು ಕಾಲನಡಿಗೆಯಲ್ಲಿ ಪ್ಲಾಟಿನ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಕಲ್ಲಪ್ಪ ಎಂಬುವವರು ನನ್ನನ್ನು ಮುಂದೆ ಬಂದು ಹಿಡಿದುಕೊಂಡು ''ಲೇ ಬೊಸಡಿಮಗನ ರೊಕ್ಕ ಕೊಡತಿ ಇಲ್ಲೋ'' ಎಂದು ಹೇಳಿ ನನ್ನ ಸೊಂಟಕ್ಕೆ ಕಲ್ಲಪ್ಪ ತನ್ನ ಬಲಗಾಲಿನಿಂದ ಒದ್ದನು. ನಂತರ ಸದರಿಯವರ ಮಗನಾದ ಮಹಾದೇವ ಎಂಬುವವರು ನನ್ನ ಎಡಗೈಯನ್ನು ಹಿಡಿದುಕೊಂಡು ನನ್ನ ಹೆಬ್ಬರಳನ್ನು ತನ್ನ ಬಾಯಿಯಲ್ಲಿ ಇಟ್ಟು ಕಚ್ಚಿದನು. ನಂತರ ಕಲ್ಲಪ್ಪನ ಹಿರಿಯ ಮಗನಾದ ಮುದಕಪ್ಪ ಮತ್ತು ಸದರಿಯವರ ತಮ್ಮನ ಮಗನಾದ ಸಿದ್ದಲಿಂಗಪ್ಪ

ಎಂಬುವವರನ್ನು ಫೋನ್ ಮಾಡಿ ನಾನು ಇದ್ದ ಕಡೆಗೆ ಬರಮಾಡಿಕೊಂಡರು. ನಂತರ ಕಲ್ಲಪ್ಪನವರ ಕುಟುಂಬಸ್ಥರಾದ ಗಿರಿಜವ್ವ ಮತ್ತು ಕವಿತಾ ಎಲ್ಲರೂ ಸೇರಿ ನನ್ನನ್ನು ಕೆಡವಿ ಹೊಡೆಯಲು ಆರಂಭಿಸಿದರು. ಸದರಿಯವರು ಎಲ್ಲರೂ ಸೇರಿ ಕಲ್ಲಿನಿಂದ ನನ್ನನ್ನು ಹೊಡೆದರು. ನನ್ನ ಬೆನ್ನು, ಎರಡು ಕಾಲುಗಳಿಗೆ ಮತ್ತು ಕೈಗೆ ಹೊಡೆದರು. ಅದನ್ನು ನೋಡಿದ ಇಬ್ಬರು ಊರಿನವರಾದ ಚಾಸಾ-4 ಮತ್ತು 5 ರವರು ಬಂದು ಜಗಳವನ್ನು ಬಿಡಲು ಬಂದರು.

ನಂತರ ಚಾಸಾ-3 ರವರು ಧಾರವಾಡನ ಅಂಬುಲೆನ್ಸ ಗೆ ಕರೆ ಮಾಡಿ ನಾನು ಇದ್ದ ಜಾಗಕ್ಕೆ ಬರಮಾಡಿಕೊಂಡರು. ಸದರಿಯವರು ನನ್ನನ್ನು ಅಂಬುಲೆನ್ಸ ಗಾಡಿಗೆ ಹತ್ತಿಸಿ ಕಳುಹಿಸಿದರು. ನಂತರ ನಾನು ಧಾರವಾಡಗೆ ತಲುಪಿದಾಗ ಸಮಯ ಮಧ್ಯ ರಾತ್ರಿ ಕಳೆದು 1-00 ಗಂಟೆ ಆಗಿತ್ತು. ನಾನು ಧಾರವಾಡ ಸಿವಿಲ್ ಆಸ್ಪತ್ರೆಯಲ್ಲಿರುವ ಪೊಲೀಸ ರವರಿಗೆ ದೂರನ್ನು ನೀಡಿದೆ. ನಂತರ ನಾನು ಮರುದಿನ ಕಲಘಟಗಿ ಪೊಲೀಸ ಠಾಣೆಗೆ ಬೆಳಿಗ್ಗೆ ಬಂದು ಕಲ್ಲಪ್ಪ, ಮುದಕಪ್ಪ, ಮಹಾದೇವಪ್ಪ, ಸಿದ್ದಲಿಂಗಪ್ಪ, ಗಿರಿಜವ್ವ ಮತ್ತು ಕವಿತಾ ರವರ ವಿರುದ್ಧ ದೂರನ್ನು ನೀಡಿದೆ. ಚಾಸಾ-3 ರಿಂದ 6, 8 ಮತ್ತು 9 ರವರು ಈ ಪ್ರಕರಣದ ಘಟನೆಯ ಸಾಕ್ಷಿಗಳಾಗಿರುತ್ತಾರೆ.

ನಾನು ದೂರು ಕೊಟ್ಟದ ನಂತರ ದಿಃ 04.09.2024 ರಂದು ಬೆಳಿಗ್ಗೆ 10.30 ಗಂಟೆಗೆ ನೀರಸಾಗರಕ್ಕೆ ಬಂದು ನನ್ನನ್ನು ಹೊಡೆದ ಸ್ಥಳವನ್ನು ನಾನು ತೋರಿಸಿದಂತೆ ಪೊಲೀಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿಲಾಯಿತು. ಅದೇ ಸಮಯ ನನ್ನ ಹೆಂಡತಿಯಾದ ಚಾಸಾ-7 ರವರು ಸಹ ಉಪಸ್ಥಿತಿಯಲ್ಲಿ ಇದ್ದರು. ಸದರಿ ಘಟನಾ ಸ್ಥಳದ ಚಕಬಂದಿ ಪೂರ್ವಕ್ಕೆ ಕಲ್ಲಪ್ಪರವರ ಮನೆ, ಪಶ್ಚಿಮಕ್ಕೆ ಬೀರದೇವರ ಗುಡಿ, ಉತ್ತರಕ್ಕೆ ಸಂಗಪ್ಪ ಮಾಲೀಕರ ರವರ ಮನೆ ಮತ್ತು ದಕ್ಷಿಣಕ್ಕೆ ನನ್ನ ಮನೆ ಇರುತ್ತದೆ. ಘಟನಾ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಯನ್ನು ಪಂಚನಾಮೆ ಮಾಡಿ ನಾನು ತೊಟ್ಟಿದ ಶರ್ಟ್ ಸ್ಥಳದಲ್ಲಿಯೇ ಇತ್ತು ಅದನ್ನು ಪೊಲೀಸರು ಪಂಚನಾಮೆಯ ವೇಳೆ ವಶಪಡಿಸಿಕೊಂಡರು. ನಂತರ ಪೊಲೀಸರು ಪೊಲೀಸ ಠಾಣೆಗೆ ತಗೆದುಕೊಂಡು ಹೋದರು. ಸದರಿ ಪಂಚನಾಮೆಯ ವೇಳೆ ಫೋಟೋಗಳನ್ನು ತೆಗೆದರು. ಪೊಲೀಸರು ಸ್ಥಳದಲ್ಲಿಯೆ ತನ್ನ ಬಳಿ ಇದ್ದ ಫೈಲ್‌ನಲ್ಲಿ ಏನೋ ಬರೆದುಕೊಂಡರು.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸಹಿಯನ್ನು ತಕರಾರಿಗೆ ಒಳಪಟ್ಟು ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯ ವೇಳೆ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

ಸಾಕ್ಷಿಯು ಕಲಂ 63ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ಸಾಕ್ಷಿಯು ಹಾಥ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-6 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಗಳನ್ನು ಗುರುತಿಸಿದ್ದು ಸದರಿಯವರ ಹೆಸರುಗಳು ಕಲ್ಲಪ್ಪ, ಮುದಕಪ್ಪ, ಮಹಾದೇವಪ್ಪ, ಸಿದ್ದಲಿಂಗಪ್ಪ, ಗಿರಿಜವ್ವ ಮತ್ತು ಕವಿತಾ ಇರುತ್ತದೆ. ಸದರಿಯವರು ಈ ಪ್ರಕರಣದ ಆರೋಪಿತರು ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ 1 ರಿಂದ 6 ನೇ ಆಪಾದಿತರ ಪರ ಶ್ರೀ ಎಸ್ ಎಸ್ ಸಿ ವಕೀಲರು**

ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪೊಲೀಸರಿಗೆ ನೀಡಿದ ದೂರನ್ನು ಸ್ವತಃ ನನ್ನ ಕೈಯಿಂದಲೇ ಬರೆಯಲ್ಪಟ್ಟಿದ ದೂರು. ದಿಃ 22.09.2024 ರಂದು ಘಟನೆ ಆಗಿದ್ದು, ನಿಪಿ1 ರಲ್ಲಿ ಘಟನೆ ಆಗಿರುವ ದಿನಾಂಕ 02.09.2024 ಎಂದು ನಮೂದಾಗಿದ್ದು ಅವು ಸಹ ಸರಿಯಿದೆ. ದಿಃ 03.09.2024 ರಂದು ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದರು ಎಂದರೆ ಸರಿ. ದಿಃ 23.09.2024 ರಂದು ಬೆಳಿಗ್ಗೆ 10.30 ಗಂಟೆಗೆ ನಾನು ಪೊಲೀಸರ ಠಾಣೆಗೆ ಬಂದು ಆರೋಪಿತರ

ವಿರುದ್ಧ ದೂರನ್ನು ನೀಡಿದೆ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಸದರಿ ದೂರು ಗಣೀಕೃತವಾಗಿದ್ದು ಎಂದರೆ ಸಾಕ್ಷಿಯು ತಾನು ಕೈಯಿಂದ ಬರೆದಿದ್ದ ದೂರನ್ನು ತಾನೇ ಸ್ವತಃ ಸದರಿ ದೂರನ್ನು ಗಣೀಕೃತ ಮಾಡಿಸಿರುವುದಾಗಿ ನುಡಿಯುತ್ತಾರೆ. ನಾನು ಕೈಯಿಂದ ಬರೆದಿದ್ದ ದೂರು ಮತ್ತು ಗಣೀಕೃತ ಮಾಡಿಸಿದ್ದ ದೂರನ್ನು ಸೇರಿಸಿ ಪೊಲೀಸ ಠಾಣೆಗೆ ನೀಡಿದೆ.

ಸಾಕ್ಷಿಗೆ ಈ ಪ್ರಕರಣದ ಚಾರ್ಜ ಶೀಟ್ ಮತ್ತು ಅಂತಿಮ ವರದಿ ಮತ್ತು ಅದರೊಂದಿಗೆ ಲಗತ್ತಿದ್ದ ಎಲ್ಲಾ ಕಾಗದ ಪತ್ರಗಳನ್ನು ತೋರಿಸಿ ತಾನು ಕೈಯಿಂದ ಬರೆದಿದ್ದ ದೂರನ್ನು ಗುರುತಿಸುವಿರಾ ಎಂದರೆ ಸಾಕ್ಷಿಯು ಕೈಯಿಂದ ಬರೆಯಲ್ಪಟ್ಟಿರುವ ಒಂದು ದಾಖಲೆಯನ್ನು ತೋರಿಸಿ ಅದೇ ತಾನು ತನ್ನ ಕೈಯಿಂದ ಬರೆದಿರುವ ದೂರು ಎಂದು ಹೇಳಿ ಗುರುತಿಸುತ್ತಾರೆ. ಅದನ್ನು ನಿಪಿ7 ಎಂದು ಗುರುತಿಸಲಾಯಿತು. ನಾನು ನಿಪಿ1 ರಲ್ಲಿರುವ ದೂರನ್ನು ಧಾರವಾಡದಲ್ಲಿ ಗಣೀಕೃತ ಮಾಡಿಸಿದೆ. ಸದರಿ ದೂರನ್ನು ನನ್ನ ಸ್ನೇಹಿತರಾದ ದೊಡ್ಡಮನಿ ಎಂಬುವವರು ಗಣೀಕೃತ ಮಾಡಿರುತ್ತಾರೆ. ಸದರಿ ದೂರನ್ನು ದೊಡ್ಡಮನಿ ಎಂಬುವವರು ಧಾರವಾಡದ ಡಿ.ಸಿ ಆಫೀಸ್ ನಲ್ಲಿ ಮಾಡಿಸಿರುತ್ತಾರೆ. ದಿಃ 23.09.2024 ರಂದು ಸದರಿ ದೊಡ್ಡಮನಿಯವರು ಡಿ.ಸಿ ಆಫೀಸ್ ಮುಂದೆ ಸತ್ಯಾಗ್ರಹ ಕುತಿದ್ದರು. ಸದರಿಯವರು ಸತ್ಯಾಗ್ರಹ ಮಾಡಿದ ಸ್ಥಳದಲ್ಲಿ ದೂರನ್ನು ಗಣೀಕೃತ ಮಾಡಿ ಕೊಟ್ಟರು.

**ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**